ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 204/2021

ಸಿ.ಡಬ್ಲ್ಯೂ-2, ಪಿ.ಡಬ್ಲ್ಯೂ,2

ದಿಃ **10.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಮಹೇಶ |
| ಗಂಡ/ತಂದೆಯ ಹೆಸರು | ಸಣ್ಣೇಗೌಡ |
| ವಯಸ್ಸು | 55 ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ಹಳ್ಳದ ಕಲ್ಲಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ಆರೋಪಿ ನನಗೆ ಗೊತ್ತು. ಆರೋಪಿಯನ್ನು ಸಾಕ್ಷಿ ಗುರುತಿಸಿದ್ದಾರೆ. ಚಾಸಾ1 ಗೊತ್ತು. ನನ್ನ ಮತ್ತು ಚಾಸಾ1 ರವರ ಜಮೀನು ಅಕ್ಕಪಕ್ಕದಲ್ಲಿದೆ. ಅವರ ಜಮೀನು ಸರ್ವೆ ನಂ.21. ಸರ್ವೆ ನಂ.21 ಯಾರ ಹೆಸರಿನಲ್ಲಿತ್ತು ಎಂದು ನಾನು ತಿಳಿದುಕೊಂಡಿಲ್ಲ. ಸದರಿ ಜಮೀನಿನಲ್ಲಿ ಚಾಸಾ1 ರವರು ಹಲಸಂದೆ ಬೆಳೆ ಬೆಳೆದಿದ್ದರು. ಸುಮಾರು 6 ವರ್ಷದ ಹಿಂದೆ ಹಲಸಂದೆ ಕಾಳನ್ನು ಚೆಲ್ಲಿದ್ದರು, ಅದನ್ನು ಆರೋಪಿ ಟ್ರಾಕ್ಟರ್ ನಿಂದ ಉಳುಮೆ ಮಾಡಿಸಿದರು. ನಾನು ಈ ವಿಚಾರವಾಗಿ ಚಾಸಾ1 ರವರಿಗೆ ಕರೆ ಮಾಡಿ ತಿಳಿಸಿದೆ. ನಂತರ ಏನಾಯಿತೆಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ ರವರಿಂದಃ**

ಸರ್ವೆ ನಂ.21/3 ಚಾಸಾ1 ರವರ ಹೆಸರಿನಲ್ಲಿದೆ ಎಂದರೆ ಸರಿ. ದಿಃ02.06.2020 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ನೀವು ನಿಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಿರಿ ಎಂದರೆ ಸರಿ. ಆರೋಪಿ ಚಾಸಾ1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಚಾಸಾ1 ರವರು ಬೆಳೆದ ಹಲಸಂದೆ ಫಸಲನ್ನು ಟ್ರಾಕ್ಟರ್ ನಿಂದ ಉಳುಮೆ ಮಾಡಿಸಿ ಚಾಸಾ1 ರವರಿಗೆ ಇದರಿಂದ 10,000 ನಷ್ಟವುಂಟುಮಾಡಿದರು ಎಂದರೆ ಸರಿ. ಆರೋಪಿ ಬೆಳೆಯನ್ನು ನಾಶ ಮಾಡಿ ಹೊರಟುಹೋದರು ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ</u>**

ಚಾಸಾ1 ಹಾಗೂ ಆರೋಪಿ ಒಂದೇ ಮನೆಯವರು ಎಂದರೆ ಸರಿ. ಅವರು ವಾರಗಿತ್ತಿಯರು ಎಂದರೆ ಸರಿ. ಚಾಸಾ1 ರವರ ಗಂಡನ ಹೆಸರು ಮಂಜೇಗೌಡ. ಆರೋಪಿಯ ಗಂಡನ ಹೆಸರು ಚಂದ್ರೇಗೌಡ, ಅವರಿಬ್ಬರ ಮಾವನ ಹೆಸರು ರಾಮೇಗೌಡ, ಅತ್ತೆ ಹೆಸರು ಕಮಲಮ್ಮ. ರಾಮೇಗೌಡರವರಿಗೆ ಇಬ್ಬರು ಗಂಡುಮಕ್ಕಳು, ಮೂರು ಜನ ಹೆಣ್ಣುಮಕ್ಕಳು. ಚಾಸಾ1 ರವರ ಗಂಡ ತೀರಿಕೊಂಡು ಸುಮಾರು 15 ವರ್ಷಗಳಾಗಿರುತ್ತವೆ. ಚಾಸಾ1 ರವರು ಅವರ ಗಂಡ ತೀರಿಕೊಂಡ ನಂತರ ಹುಣಸೂರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ಆರೋಪಿಯ ಗಂಡ ತೀರಿಕೊಂಡು ಸುಮಾರು 7 ವರ್ಷಗಳಾಗಿರುತ್ತವೆ. ಕುಟುಂಬದ ಆಸ್ತಿ ರಾಮೇಗೌಡ ಇರುವಾಗಲೇ ವಿಭಾಗವಾಗಿರುತ್ತದೆ. ನನ್ನ ಜಮೀನಿನ ಸರ್ವೆ ನಂ.22. ನಮ್ಮ ಜಮೀನಿನಿಂದ ನಮ್ಮ ಊರು 100 ಮೀಟರ್ ಅಂತರದಲ್ಲಿದೆ. ಚಾಸಾ1 ರವರ ಗಂಡ ತೀರಿಕೊಂಡ ನಂತರ ಅವರ ಜಮೀನನ್ನು ನೀವೇ ವ್ಯವಸಾಯ ಮಾಡುತ್ತಿರುವುದು ಎಂದರೆ ಸರಿ. ನಾನು ಆರೋಪಿಗೆ ಒಂದು ಮೂಟೆಯಷ್ಟು ರಾಗಿ ನೀಡುತ್ತಿದ್ದೇನೆ. ಜೂನ್ ತಿಂಗಳ 2020 ರಲ್ಲಿ ಗಲಾಟೆ ನಡೆದಿರುತ್ತದೆ. ಸದರಿ ಜಮೀನು ಮಳೆ ಆಸರೆ ಜಮೀನು. ಇಂದಿಗೂ ಸಹ ಆರೋಪಿಗೆ ನೀವು ರಾಗಿ ಮೂಟೆಯನ್ನು ನೀಡುತ್ತಿದ್ದೀರಿ ಎಂದರೆ ಸರಿ. ಬೆಳೆಯನ್ನು ಹಾಕಿ ಸುಮಾರು 15 ದಿನವಾಗಿತ್ತು, ಮೊಳಕೆ ಬಂದಿತ್ತು. ಆ ಸಮಯದಲ್ಲಿ ಬೆಳೆ ಬೆಳೆದಿರಲಿಲ್ಲ ಎಂದರೆ ಸರಿಯಲ್ಲ. ಒಂದು ಎಕರೆಯಲ್ಲಿ ಬೆಳೆದಿರುತ್ತಾರೆ. ಟ್ರಾಕ್ಟರ್ ಯಾರಿಗೆ ಸೇರಿತ್ತು ಎಂದು ಸರಿಯಾಗಿ ನನಗೆ ಗೊತ್ತಿಲ್ಲ. ಈ ದಿನದಂದು ನೀವು ಹಾಗೂ ಚಾಸಾ1 ರವರು ಒಟ್ಟಿಗೆ ಇದ್ದೀರಿ ಎಂದರೆ ಸರಿ. ಜಮೀನಿಗೆ ಸುಮಾರು 8-10 ಕೆಜಿಯಷ್ಟು ಮೊಳಕೆಯನ್ನು ಹಾಕಿದ್ದೆವು, ಅದರ ಬೆಲೆ ನನಗೆ ಗೊತ್ತಿಲ್ಲ. ನಮ್ಮ ಜಮೀನನ್ನು ಹೊರತುಪಡಿಸಿ ಇನ್ನಿತರೆ ಜನರ ಜಮೀನು ಇವೆ. ಆ ದಿನದಂದು ನನ್ನನ್ನು ಹೊರತುಪಡಿಸಿ ಇನ್ಯಾರೂ ಇರಲಿಲ್ಲ. ಜಮೀನಿನ ಅಕ್ಕಪಕ್ಕದಲ್ಲಿ ಮನೆಗಳು ಇವೆ ಎಂದರೆ ಸರಿ. ಮನೆಗಳಲ್ಲಿ ಜನರು ವಾಸವಾಗಿದ್ದಾರೆ ಎಂದರೆ ಸರಿ. ಆರೋಪಿ ಹಾಗೂ ಚಾಸಾ1 ರವರ ನಡುವೆ ಒಂದು ದಾವೆ ನಡೆಯುತ್ತಿದೆ ಎಂದರೆ ಸರಿ. ಕಮಲಮ್ಮನವರು ತೀರಿಕೊಂಡ ನಂತರ ಚಾಸಾ1 ಹಾಗೂ ಆರೋಪಿಗೆ ಅರ್ಧ ಅರ್ಧ ಭಾಗ ಮಾಡಿರುತ್ತಾರೆ ಹಾಗೂ ಅವರು ಅವರವರ ಭಾಗದಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.21/3 ರಲ್ಲಿ ಒಟ್ಟಾಗಿ ನಾನೇ ವ್ಯವಸಾಯ ಮಾಡುತ್ತಿರುವೆನು ಎಂದರೆ ಸರಿ. ಚಾಸಾ1 ಮತ್ತು ಆರೋಪಿ ಅರ್ಧ ಅರ್ಧ ಭಾಗದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ1 ಹಾಗೂ ಆರೋಪಿ ಅವರವರ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡಿದ್ದಾರೆ, ನೀವು ಯಾವುದೇ ಘಟನೆ ನಡೆಯದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ ಹಾಗೂ ನೀವು ಹೇಳುವ ಹಾಗೆ 10,000 ರೂ. ನಷ್ಟವಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ:**ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.